ದಿನಾಂಕಃ 28.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ವಾದಿಯರ ಪರ ಶ್ರೀ ಎಸ್.ಬಿ.ಹೆಚ್ ವಕೀಲರಿಂದಃ**

ನಾನು ಶಾಲೆ ಕಲಿತಿಲ್ಲ. ನಾನು ಮುಂಚೆ ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದೆ. ಈಗ 4-5 ವರ್ಷಗಳಿಂದ ಸಹಿ ಮಾಡಲು ಕಲಿತಿದ್ದೇನೆ. ಪ್ರಸ್ತುತ ದಾವೆಯನ್ನು ಮಹಾದೇವಿ ನಮ್ಮ ವಿರುದ್ಧ ಹಾಕಿರುತ್ತಾಳೆ. ಎಷ್ಟು ಆಸ್ತಿಗಳಿಗೆ ಸಂಬಂಧಿಸಿದಂತೆ ದಾವೆ ಹಾಕಿರತ್ತಾಳೆ ಎಂದರೆ ಸಾಕ್ಷಿಯು ನಮ್ಮ ಮನೆಗೆ ಸಂಬಂಧಿಸಿದಂತೆ ಮಾತ್ರ ನನಗೆ ಗೊತ್ತಿದೆ. ಸದರಿ ಮಹಾದೇವಿ ಏನು ಪರಿಹಾರ ಕೇಳಿ ದಾವೆ ಸಲ್ಲಿಸಿದ್ದಾಳೆ ಎಂದರೆ ಸಾಕ್ಷಿಯು ತನಗೆ ಮನೆ ಬೇಕೆಂದು ಕೇಸು ಹಾಕಿರುತ್ತಾಳೆ. ಸದರಿ ಮನೆಯ ಪಂಚಾಯತಿ ನಂಬರ್ 70/1 ಇರುತ್ತದೆ. ಸದರಿ ಮನೆ ಜಂತಿ ಮನೆ ಇರುತ್ತದೆ. ಅದರ ಅಳತೆಯನ್ನು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಸದರಿ ಮನೆಯ ಚೆಕ್ಕಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸಿದ್ದಯ್ಯ ಗುರುಸಿದ್ದಯ್ಯ ಹಿರೇಮಠರವರ ಮನೆ, ದಕ್ಷಿಣಕ್ಕೆ ರಸ್ತೆ ಮತ್ತು ಉತ್ತರಕ್ಕೆ ರಸ್ತೆ ಇರುತ್ತದೆ.

ನನ್ನ ಮದುವೆಯಾಗಿ ಸುಮಾರು 28 ವರ್ಷಗಳು ಆಗಿರಬಹುದು. ನಿಡಿ.106 ನೇದ್ದನ್ನು ಬರೆಸಿಕೊಳ್ಳುವ ಕಾಲಕ್ಕೆ ನನ್ನ ಮದುವೆಯಾಗಿ ಎರಡು ಮಕ್ಕಳು ಜನಿಸಿದ್ದರು. ಆ ಸಮಯಕ್ಕೆ ನನ್ನ ಮಕ್ಕಳ ವಯಸ್ಸು 2-3 ವರ್ಷಗಳು ಇರಬಹುದು. ನನ್ನ ಗಂಡ ಬದುಕಿದ್ದಾರೆ. ನಿಡಿ.106 ರಲ್ಲಿ ನನ್ನ ಗಂಡನ ಹೆಸರು ಬರೆಸಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಗಂಡನ ಹೆಸರು ಯಾಕೆ ಬರೆಸಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ಬದುಕಿದ್ದರಿಂದ ಅವರ ಹೆಸರು ಬರೆಸಿರುತ್ತೇವೆಂದು ನುಡಿಯುತ್ತಾರೆ.

ಭದ್ರವ್ವನ ಗಂಡನ ಹೆಸರು ಶಂಕರಯ್ಯ ಎಂದರೆ ನಿಜ. ಆತನಿಗೆ ದೇವೇಂದ್ರಯ್ಯ ಎಂಬ ಹೆಸರಿನ ತಮ್ಮನಿದ್ದನು ಎಂದರೆ ನಿಜ. ಶಂಕರಯ್ಯ ಮತ್ತು ದೇವೇಂದ್ರಯ್ಯನ ತಂದೆಯ ಹೆಸರು ರಾಮಯ್ಯ ಎಂದರೆ ನಿಜ. ಸದರಿಯವರಿಗೆ 4 ಜನ ಸಹೋದರಿಯರು ಎಂದರೆ ನಿಜ. ಅವರೆಂದರೆ ಕಾಶವ್ವ, ಸುಶೀಲವ್ವ, ಗಂಗವ್ವ ಮತ್ತು ಮಹಾದೇವಿ. ಸದರಿ ಶಂಕರಯ್ಯ ಮತ್ತು ದೇವೇಂದ್ರಯ್ಯನಿಗೆ ಚನಬಸಯ್ಯ ಎಂಬ ಹೆಸರಿನ ತಮ್ಮ ಇರಲಿಲ್ಲ ಎಂದರೆ ನಿಜ. ಮೇಲೆ ಹೇಳಿದ ರಾಮಯ್ಯನ ತಮ್ಮನ ಹೆಸರು ಚನಬಸಯ್ಯ ಎಂದರೆ ಸರಿಯಲ್ಲ.

ಭದ್ರವ್ವನಿಗೆ ರಾಮಯ್ಯ ಎಂಬ ಹೆಸರಿನ ಮಗನಿದ್ದನು ಎಂದರೆ ನಿಜ. ಸಾಕ್ಷಿ ಮುಂದುವರೆದು ಆತ ಚಿಕ್ಕ ವಯಸ್ಸಿ ನಲ್ಲಿಯೇ ಮದುವೆಯಾಗದೆ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ.106 ರಂತೆ ದಾಖಲೆಯನ್ನು ಬರೆಸಿಕೊಡುವ ಕಾಲಕ್ಕೆ ಆತ ಬದುಕಿದ್ದ ಎಂದರೆ ಸರಿಯಲ್ಲ. ಆತ ಯಾವಾಗ ತೀರಿಕೊಂಡಿರುತ್ತಾನೆಂದು ನನಗೆ ಹೇಳಲಾಗುವುದಿಲ್ಲ. ಸದರಿ ನಿಡಿ.106 ನೇದ್ದನ್ನು ಬರೆಯುವ ಕಾಲಕ್ಕೆ ರಾಮಯ್ಯ ತೀರಿಕೊಂಡ ಬಗ್ಗೆ ಗೊತ್ತಿತ್ತು. ಸದರಿ ಸಂಗತಿಯನ್ನು ನಿಡಿ.106 ರಲ್ಲಿ ಏಕೆ ಬರೆಸಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ದೊಡ್ಡವ್ವ ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಚನಬಸಯ್ಯ ಶಂಕರಯ್ಯ ಮತ್ತು ದೇವೇಂದ್ರಯ್ಯನ ಖಾಸಾ ಸಹೋದರ ಆಗಿರುವುದಿಲ್ಲ ಆತ ರಾಮಯ್ಯನ ಸಹೋದರ ಎಂದರೆ ಸರಿಯಲ್ಲ.

ಭದ್ರವ ಅನಕ್ಷರಸ್ಥಳು ಎಂದರೆ ನಿಜ. ಅವಳಿಗೆ ಓದಲು ಬರೆಯಲು ತಿಳಿದಿರಲಿಲ್ಲ ಎಂದರೆ ನಿಜ. ನಿಡಿ.106 ರಲ್ಲಿನ ಸಂಗತಿಗಳು ಭದ್ರವಳಿಗೆ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಭದ್ರವ ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದಳು ಎಂದರೆ ನಿಜ.

ನಿಡಿ.106 ರ ಮೊದಲನೇ ಪುಟದಲ್ಲಿ ಭದ್ರವಳ ಹೆಬ್ಬೆಟ್ಟಿನ ಗುರುತು ಇರುವುದಿಲ್ಲ ಎಂದರೆ ನಿಜ. ನಿಡಿ.106 ಕ್ಕೆ ಭದ್ರವ್ವಳ ಭಾವಚಿತ್ರ ಸಹ ಅಂಟಿಸಿರುವುದಿಲ್ಲ ಎಂದರೆ ನಿಜ. ನಿಡಿ.106 ರಲ್ಲಿ ಭದ್ರವ್ವನ ಹೆಬ್ಬೆಟ್ಟಿನ ಗುರುತು ಇರುವ ಬಗ್ಗೆ ಅದನ್ನು ಗುರುತಿಸುವ ಬಗ್ಗೆ ಯಾರು ಸಹಿ ಹಾಕಿರುವುದಿಲ್ಲ ಎಂದರೆ ನಿಜ. ನಿಡಿ.106 ನೇದ್ದನ್ನು ಬಿಲಕುಂದಿ ಗ್ರಾಮದಲ್ಲಿ ತಯಾರಿಸಿರುತ್ತಾರೆ. ನಿಡಿ.106 ಬಾಂಡ್ ಪತ್ರವನ್ನು ನಮ್ಮ ದೊಡ್ಡವ್ವ ಅಂದರೆ ಭದ್ರವ್ವ ತಂದಿರುತ್ತಾಳೆ. ಎಲ್ಲಿಂದ ತಂದಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬಾಂಡ್ 100 ರೂ. ಮುಖಬೆಲೆಯದು ಇರುತ್ತದೆ. ನಿಡಿ.106 ನೇದ್ದಲ್ಲಿಯ ಸಂಗತಿಗಳು ಪರಪ್ಪನವರ ವಕೀಲರು ಟೈಪ ಮಾಡಿಸಿರುತ್ತಾರೆ. ಶಿವಲಿಂಗಯ್ಯ ರಾಚಯ್ಯ ಹಿರೇಮಠ ಈತನು ಭದ್ರವ್ವನ ತಮ್ಮನ ಮಗಳ ಮಗನಾಗಬೇಕು. ಆತ ಈರವ್ವನ ಗಂಡನಾಗಬೇಕು. ಗದಗಯ್ಯ ಬಾಳಯ್ಯ ಹಿರೇಮಠ ಈತನು 1ನೇ ಪ್ರತಿವಾದಿಯ ಗಂಡನಾಗಬೇಕು ಹಾಗೂ 2 ಮತ್ತು 3ನೇ ಪ್ರತಿವಾದಿಯರ ತಂದೆಯಾಗಬೇಕು. ನಿಡಿ.106 ರಲ್ಲಿ ಬಿ.ಸಿ ಹಿರೇಮಠ ಎಂದು ಸಹಿ ಮಾಡಿರುವ ವ್ಯಕ್ತಿ ಯಾರು ಇರುತ್ತಾರೆ ಎಂದರೆ ಸಾಕ್ಷಿಯು ಆತ ನನ್ನ ತಮ್ಮನಾಗಬೇಕೆಂದು ನುಡಿಯುತ್ತಾರೆ.

ನಿಡಿ.106 ರಲ್ಲಿ ಸ್ವತ್ತಿನ ಅಳತೆಯನ್ನು ಬರೆಸಿರುವುದಿಲ್ಲ ಎಂದರೆ ನಿಜ. ನಿಡಿ.104 ರಂತೆ ಹಾಜರುಪಡಿಸಿದ ಪ್ರಮಾಣ ಪತ್ರದಲ್ಲಿ ಪ್ರೇಮವ್ವ ಚನಬಸಯ್ಯ ಹಿರೇಮಠ ಎಂದು ದಾಖಲಿರುತ್ತದೆ ಎಂದರೆ ನಿಜ. ದಾವಾ ಆಸ್ತಿ ಮನೆ ನಂ.70/1 ಕ್ಕೆ ನನ್ನ ಹೆಸರನ್ನು ದಾಖಲಿಸುವ ಬಗ್ಗೆ ಪಂಚಾಯತಿ ಠರಾವು ಹಾಜರುಪಡಿಸಿಲ್ಲ ಎಂದರೆ ನಿಜ. ನಿಡಿ.101 ರಂತೆ ಹಾಜರುಪಡಿಸಿರುವ ಉತಾರ ಸನ್ 2022-23 ನೇ ಸಾಲಿಗೆ ಸಂಬಂಧಿಸಿರುತ್ತದೆ ಎಂದರೆ ನಿಜ. ಅದೇ ರೀತಿ ನಿಡಿ.102  ಹಾಜರುಪಡಿಸಿರುವ ಕರ ಪಾವತಿ ಸಹ ಸನ್ 2022 ನೇ ಸಾಲಿಗೆ ಸಂಬಂಧಿಸಿರುತ್ತದೆ ಎಂದರೆ ನಿಜ. ಸನ್

2009 ರಿಂದ ಸದರಿ ಮನೆಯು ನನ್ನ ಹೆಸರಿನಲ್ಲಿ ದಾಖಲಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ನಿಡಿ.103 ರಂತೆ ಹಾಜರುಪಡಿಸಿದ ವಿದ್ಯುಚ್ಛಕ್ತಿ ಬಿಲ್ ನಲ್ಲಿ ಆಸ್ತಿ ನಂ. ನಮೂದಿಸಿಲ್ಲ ಎಂದರೆ ನಿಜ. ನಿಡಿ.106ಕ್ಕೆ ಸಹಿ ಮಾಡಿರುವ ಸಾಕ್ಷಿದಾರರು ನಮ್ಮ ಸಂಬಂಧಿಕರು ಎಂದರೆ ನಿಜ. ಸಾಕ್ಷಿದಾರರು ನಮ್ಮ ಸಂಬಂಧಿಕರು ಇರುವುದರಿಂದ ಹಾಗೂ ಭದ್ರವ್ವ ಇವಳು ಅನಕ್ಷರಸ್ಥಳು ಇದ್ದ ಕಾರಣ ಅದರ ಗೈರುಪಾಯಿದೆ ಪಡೆದುಕೊಂಡು ನಿಡಿ.106 ರಂತೆ ಖೊಟ್ಟಿ ಹಕ್ಕುಬಿಟ್ಟ ಪತ್ರವನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಡಿ.106 ಕ್ಕೆ ಭದ್ರವ್ವ ಹೆಬ್ಬೆಟ್ಟಿನ ಗುರುತು ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

ಬಿಲಕುಂದಿ ಗ್ರಾಮದಲ್ಲಿ ಬಸ್ ನಿಲ್ದಾಣದಿಂದ ಊರೊಳಗೆ ಹೋಗಬೇಕಾದರೆ ಪೂರ್ವ ದಿಕ್ಕಿಗೆ ನಮ್ಮ ಜಾಗ ಇರುತ್ತದೆ ಎಂದರೆ ನಿಜ. ಸದರಿ ಜಾಗವು 1ನೇ ವಾದಿ ಮಹಾದೇವಿಯ ಆಸ್ತಿ ಇರುತ್ತದೆ ಎಂದರೆ ನಿಜ. ಸದರಿ ಜಾಗದಲ್ಲಿ ನಾವು ಎರಡು RCC ಮನೆಗಳನ್ನು ಕಟ್ಟುತ್ತಿದ್ದೇವೆ ಎಂದರೆ ನಿಜ. ಎರಡು ಮನೆಗಳು ಪಶ್ಚಿಮಕ್ಕೆ ಮುಖ ಮಾಡಿ ಮುಖ್ಯ ದ್ವಾರಗಳು ಇರುತ್ತವೆ. ಸದರಿ ಮನೆಗಳನ್ನು ಕಟ್ಟಿಸಲು ಪರವಾನಿಗೆ ಪಡೆದಿರುತ್ತೇವೆ. ಸದರಿ ಎರಡು ಮನೆಗಳು ನನ್ನ ಹೆಸರಿಗೆ ಇರುತ್ತವೆ.

ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳು ತಿಳಿದಿರುತ್ತವೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಕಂಡಿಕೆ 4 ರಲ್ಲಿ ಸದರಿ ದಾವಾ ಆಸ್ತಿ ಮನೆಯನ್ನು ಹೊರತು ಪಡಿಸಿ ನನಗೆ ಯಾವುದೇ ಮನೆ, ಖುಲ್ಲಾ ಜಾಗ ಇರುವುದಿಲ್ಲ ಎಂದು ಹೇಳಿರುತ್ತೀರಿ ಎಂದರೆ ಸಾಕ್ಷಿಯು ನಾನು ಆ ರೀತಿ ಹೇಳಿ ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯು ಭದ್ರವ್ವಳ ಸ್ವಂತ ಆಸ್ತಿ ಇರುತ್ತದೆ ಎಂದು ಹೇಳಿದ್ದು ಅವಳಿಗೆ ಅದು ಹೇಗೆ ಬಂದಿರುತ್ತದೆ ಎಂದು ನಾನು ದಾಖಲೆ ನೋಡಿರುವುದಿಲ್ಲ.

ಸದರಿ ಸಂಗತಿಯನ್ನು ಬರೆಸಲು ದಾಖಲಾತಿಯನ್ನು ನೋಡಿರುತ್ತೀರಾ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮನೆಯು ಭದ್ರವ್ವಳಿಗೆ ಅವಳ ಮಾವ ಅಂದರೆ ಗಂಡನ ತಂದೆಯಿಂದ ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ ಏನು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಡಿ.106 ನೇದ್ದನ್ನು ನೋಂದಣಿ ಮಾಡಿಕೊಳ್ಳಲು ಏನು ತೊಂದರೆ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಸಂಬಂಧ ಚೆನ್ನಾಗಿ ಇದ್ದುದರಿಂದ ನೋಂದಣಿ ಮಾಡಿಸಿಕೊಳ್ಳಲಿಲ್ಲ ಎಂದು ನುಡಿಯುತ್ತಾರೆ. ಭದ್ರವ್ವಳಿಂದ ನಿಡಿ.106 ರಂತೆ ಪತ್ರವನ್ನು ಬರೆಸಿಕೊಳ್ಳುವ ಕಾಲಕ್ಕೆ ಅವಳ ಗಂಡ ಶಂಕರಯ್ಯನಿಗೆ ಅಣ್ಣ ತಮ್ಮಂದಿರು ಹಾಗೂ ಅಕ್ಕ ತಂಗಿಯರು ಇರುವ ಬಗ್ಗೆ ಗೊತ್ತಿತ್ತು. ಸದರಿ ಆಸ್ತಿಯನ್ನು ಭದ್ರವ್ವಳು ನನಗೆ ಬಿಟ್ಟು ಕೊಡುವ ಕಾಲಕ್ಕೆ ಅವರನ್ನು ವಿಚಾರಿಸಿರುತ್ತೀರಾ ಎಂದರೆ ಸಾಕ್ಷಿಯು ಎಲ್ಲರ ಸಂಬಂಧ ಚೆನ್ನಾಗಿದ್ದರಿಂದ ಅವರು ಸುಮ್ಮನಾಗಿದ್ದು ನಾನು ವಿಚಾರಿಸಿಲ್ಲ ಎಂದು ನುಡಿಯುತ್ತಾರೆ. ನಿಡಿ.106 ಕ್ಕೆ ಸದರಿಯವರ ಸಹಿ ಪಡೆದುಕೊಳ್ಳಲು ತೊಂದರೆ ಇರಲಿಲ್ಲ. ಸದರಿ ಆಸ್ತಿಯಲ್ಲಿ ಶಂಕರಯ್ಯನ ಅಣ್ಣ ತಮ್ಮಂದಿರು ಹಾಗೂ ಅಕ್ಕ ತಂಗಿಯರಿಗೂ ಸಾಮೂಹಿಕ ಪಾಲು ಇರುತ್ತದೆ ಎಂದರೆ ಸರಿಯಲ್ಲ. ವಾದಿಯರಿಗೆ ಮತ್ತು ರಾಮಯ್ಯನ ಉಳಿದ ವಾರಸುದಾರರಿಗೆ ಸದರಿ ಆಸ್ತಿಯಲ್ಲಿ ಪಾಲು ಹೋಗಬಾರದೆಂಬ ಉದ್ದೇಶದಿಂದ ನಿಡಿ.106 ರಂತೆ ಖೊಟ್ಟಿ ಪತ್ರವನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರಸ್ತುತ ಸದರಿ ದಾವಾ ಆಸ್ತಿ ಮನೆಯು ಕೆಂಪು ಹಂಚಿನ ಇರುತ್ತದೆ. ನಾನು ಹೇಳುವಂತೆ ಭದ್ರವ್ವ ಯಾವ ಕಾಲಕ್ಕೂ ಗೋಕಾಕಕ್ಕೆ ಬಂದು ನಿಡಿ.106 ರಂತೆ ಸದರಿ ದಾವಾ ಆಸ್ತಿ ಮನೆಗೆ ಸಂಬಂಧಿಸಿದಂತೆ ನನ್ನ ಪರವಾಗಿ ಹಕ್ಕುಬಿಟ್ಟ ಪತ್ರ ಮಾಡಿ

ಕೊಟ್ಟಿರದೇ ಇದ್ದರೂ ಸಹ ಸದರಿ ಆಸ್ತಿಯನ್ನು ಹೇಗಾದರೂ ಮಾಡಿ ಪಡೆಯಬೇಕೆಂಬ ಉದ್ದೇಶದಿಂದ ಖೊಟ್ಟಿ ಪತ್ರವನ್ನು ಸೃಷ್ಟಿಸಿಕೊಂಡು ಆ ದಿಶೆಯಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ.106 ರಂತೆ ಪತ್ರವನ್ನು ಮಾಡಿಕೊಳ್ಳುವ ಸಮಯದಲ್ಲಿ ನಾನು ಸಾರ್ವಜನಿಕ ಪತ್ರಿಕಾ ಪ್ರಕಟಣೆ ಹೊರಡಿಸಿರುವುದಿಲ್ಲ. ಆ ರೀತಿ ಪತ್ರಿಕಾ ಪ್ರಕಟಣೆ ಹೊರಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ